অপর ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ8/2020

ದಿನಾಂಕ **22.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-2

ಪಾಟೀ ಸವಾಲುಃ ವಾದಿಯ ಪರ ಶ್ರೀ.ಪಿ.ಎನ್ ವಕೀಲರಿಂದಃ

ಪ್ರತಿವಾದಿ ಸುಜಾತಮ್ಮ ನನಗೆ ತಂಗಿಯಾಗಬೇಕು. ಪ್ರತಿವಾದಿಯ ಪಿ.ಎ ಹೋಲ್ಡರ್ ಪವನ್ ಕಲ್ಯಾಣ್ ನನಗೆ ತಂಗಿ ಮಗ. ಸುಜಾತಮ್ಮ ಮತ್ತು ಅವರ ಮಗ ನಮ್ಮ ಮನೆಯಲ್ಲೇ ಹೆಚ್ಚಾಗಿ ವಾಸ ಮಾಡುತ್ತಾರೆ ಎಂದರೆ ಯಾವಾಗಲಾದರೂ ಒಮ್ಮೆ ಬಂದು ಹೋಗುತ್ತಾರೆ. ಪ್ರತಿವಾದಿ ಸುಜಾತಮ್ಮ ದಾವಾ ಆಸ್ತಿಯ ಪಕ್ಕದಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಪಕ್ಕದಲ್ಲಿರುವ ಮನೆಯನ್ನು ಸುಜಾತಮ್ಮ ರಾಧಾಕೃಷ್ಣ ರೆಡ್ಡಿ ಮತ್ತು ಅವರ ಕುಟುಂಬದಿಂದ ಕ್ರಯಕ್ಕೆ ಪಡೆದಿದ್ದಾರೆ ಸದರಿ ಕ್ರಯ ಪತ್ರವನ್ನು ನೋಡಿದ್ದೇನೆ ಆದರೆ ಈಗ ನೆನಪಿಲ್ಲ. ಸುಜಾತಮ್ಮ ಖರೀದಿ ಮಾಡಿದ ಮನೆಯ ಚೆಕ್ಕು ಬಂದಿ ಪೂರ್ವಕ್ಕೆ ಸುಜಾತಮ್ಮ ನ ಮನೆ, ಖಾಲಿ ಜಾಗ ಮತ್ತು ರತ್ನಮ್ಮ ರವರ ಜಮೀನು, ಪಶ್ಚಿಮಕ್ಕೆ ಸುಜಾತಮ್ಮ ನ ಮನೆ ಅವರದೆ ಖಾಲಿ ಜಾಗ ಮತ್ತು ಬೇರೆಯವರ ಒಂದು ಮನೆ, ಉತ್ತರಕ್ಕೆ ಸುಜಾತಮ್ಮ ನ ಮನೆ, ಅವರದೆ ಖಾಲಿ ಜಾಗ ಮತ್ತು ರತ್ನಮ್ಮ ರವರ ಜಮೀನು, ದಕ್ಷಿಣಕ್ಕೆ ಸುಜಾತಮ್ಮ ನ ಮನೆ, ಅವರದೆ ಖಾಲಿ ಜಾಗ ಮತ್ತು ರಸ್ತೆ.

2. ನಾನು ಈ ಮೇಲೆ ಹೇಳಿದ ಚೆಕ್ಕುಬಂದಿ ಸುಜಾತಮ್ಮ ರವರು ಖರೀದಿ ಮಾಡಿದ ಮನೆಯ ಚೆಕ್ಕುಬಂದಿ ಎಂದು ಕ್ರಯಪತ್ರದಲ್ಲಿ ಇದೆಯಾ ಎಂದರೆ ಇದೆ ಸುಜಾತಮ್ಮ ಖರೀದಿ ಮಾಡಿದ ಮನೆಯ ಮತ್ತು ಖಾಲಿ ಜಾಗದ ವಿಸ್ತೀರ್ಣ ಒಟ್ಟಾಗಿ ಪೂರ್ವ-ಪಶ್ಚಿಮಃ 50 ಅಡಿ, ಉತ್ತರ-ದಕ್ಷಿಣಃ 88 ಅಡಿ ಅಂದಾಜು ಇರಬಹುದು. ಸುಜಾತಮ್ಮ ಕ್ರಯಕ್ಕೆ ಪಡೆದ ಮನೆ ಮತ್ತು ಜಾಗವನ್ನು ಪಿ.ಡಿ.ಓ ರವರು ಅಳತೆ ಮಾಡಲು ಬಂದಾಗ ನಾನು ಇದ್ದು ನೋಡಿದ್ದೇನೆ. ಸುಜಾತಮ್ಮನ ಹೆಸರಿನಲ್ಲಿ ಇರುವ ಖಾತೆ ಮತ್ತು ದಾಖಲೆಯನ್ನು ನೋಡಿರುವುದಿಲ್ಲ.

3. ನಿಪಿ-6 ರಿಂದ 8 ರಲ್ಲಿ ಕಾಣುವ ಪಾಯವನ್ನು ಸುಮಾರು 4-5 ವರ್ಷದ ಹಿಂದೆ ತೋಡಿರಬಹುದು. ಸದರಿ ಪಾಯ ಹಾಕುವಾಗ ವಾದಿಗೂ ಪ್ರತಿವಾದಿಗೂ ಜಗಳ ಆಯಿತು ಎಂದರೆ ಸರಿ. ಸದರಿ ಜಗಳದ ಕಾರಣವಾಗಿ ವಾದಿ ಪ್ರತಿವಾದಿಯ ಮೇಲೆ ದೂರು ದಾಖಲಿಸಿದ್ದರು ಎಂದರೆ ಸರಿ. ಜಗಳ ಆದ ನಂತರವೇ ವಾದಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಿಪಿ-6 ರಿಂದ 8 ರಲ್ಲಿ ಕಾಣುವ ಜಾಗ ವಾದಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ, ಪ್ರತಿವಾದಿಗೆ ಸಂಬಂಧಿಸಿದ್ದು. ವಾದಿಗೆ ಸೇರಿದ ಜಾಗದಲ್ಲಿ ಪ್ರತಿವಾದಿ ಪಾಯ ತೋಡಿದ್ದಕ್ಕೆ ವಾದಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಸಂಬಂಧಿಕರು ಎಂದು ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ